# ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **922(1069)**

ಸದಸ್ಯರ ಹೆಸರು : **ಡಾ: ಎಂ ಜಿ ಮುಳೆ (ವಿಧಾನ ಸಭಾಕ್ಷೇತ್ರ)**

ಉತ್ತರಿಸುವ ದಿನಾಂಕ : **12.03.2026**

ಉತ್ತರಿಸುವ ಸಚಿವರು : **ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬೀದರ್ ಜಿಲ್ಲೆಯು ಕಲ್ಯಾಣ ಕರ್ನಾಟಕ ಭಾಗದ ಆಯಕಟ್ಟಿನ ಜಿಲ್ಲೆಯಾಗಿದ್ದರೂ, ಇಲ್ಲಿನ ಬಹುತೇಕ ಸರ್ಕಾರಿ ಕಚೇರಿಗಳಲ್ಲಿ ಮಂಜೂರಾದ ಹುದ್ದೆಗಳ ಪೈಕಿ ಶೇಕಡ 40ಕ್ಕಿಂತ ಹೆಚ್ಚು ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೀದರ ಜಿಲ್ಲೆಯ ವಿವಿಧ 62 ಇಲಾಖಾ ಕಚೇರಿಗಳಲ್ಲಿ ಒಟ್ಟು 23,033 ವಿವಿಧ ಹುದ್ದೆಗಳು ಮಂಜೂರಾಗಿದ್ದು ಅವುಗಳ ಪೈಕಿ 16,063 ಹುದ್ದೆಗಳು ಭರ್ತಿಯಾಗಿದ್ದು ಇನ್ನೂ 6970 ಹುದ್ದೆಗಳು ಖಾಲಿ ಇರುತ್ತವೆ. ಮಂಜೂರಾದ ಹುದ್ದೆಗಳಿಗೆ ಹೋಲಿಸಿದಾಗ ಖಾಲಿ ಹುದ್ದೆಗಳ ಪ್ರಮಾಣ ಶೇ. 30ರಷ್ಟು ಇರುತ್ತದೆ. |
| (ಆ) | ಜಿಲ್ಲೆಯ ಕಂದಾಯ, ಶಿಕ್ಷಣ, ಆರೋಗ್ಯ ಮತ್ತು ಪೊಲೀಸ್ ಇಲಾಖೆಗಳಲ್ಲಿ ಪ್ರಸ್ತುತ ಮಂಜೂರಾದ ಭರ್ತಿಯಾಗಿರುವ ಮತ್ತು ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಇಲಾಖಾವಾರು ಮತ್ತು ವೃಂದವಾರು ಸಂಪೂರ್ಣ ವಿವರ ನೀಡುವುದು) | ಕಂದಾಯ, ಶಿಕ್ಷಣ, ಆರೋಗ್ಯ ಮತ್ತು ಪೊಲೀಸ ಇಲಾಖೆಗಳಲ್ಲಿ ಮಂಜೂರಾಗಿರುವ ಭರ್ತಿಯಾಗಿರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರವನ್ನು ಅನುಬಂಧ-ಎ ರಲ್ಲಿ ನೀಡಲಾಗಿದೆ. |
| (ಇ) | ಕಳೆದ ಎರಡು ವರ್ಷಗಳಿಂದ ಸಂವಿಧಾನದ ಕಲಂ 371(ಜೆ) ಅಡಿಯಲ್ಲಿ ಬೀದರ್ ಜಿಲ್ಲೆಯ ಸ್ಥಳೀಯ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಎಷ್ಟು ಹುದ್ದೆಗಳು ಭರ್ತಿಯಾಗದೆ ಬಾಕಿ ಉಳಿದಿವೆ; ಈ ವಿಳಂಬಕ್ಕೆ ಕಾರಣವೇನು; | ಜಿಲ್ಲೆಯ 62 ವಿವಿಧ ಇಲಾಖಾ ಕಚೇರಿಗಳ ಪೈಕಿ 9 ಕಚೇರಿಗಳಲ್ಲಿ 371 (ಜೆ) ಅಡಿಯಲ್ಲಿ ಒಟ್ಟಾರೆ 314 ಹುದ್ದೆಗಳು ಭರ್ತಿಯಾಗದೇ ಬಾಕಿ ಉಳಿದುಕೊಂಡಿವೆ. ನೇರ ನೇಮಕಾತಿ ಹಾಗೂ ಪದೋನ್ನತಿ ಸಂಧರ್ಭದಲ್ಲಿ ಇಲಾಖೆಗಳ ವೃಂದ ಮತ್ತು ನೇಮಕಾತಿ ನಿಯಮಗಳಂತೆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುತ್ತದೆ. |
| (ಈ) | ಸಿಬ್ಬಂದಿ ಕೊರತೆಯಿಂದಾಗಿ ಜಿಲ್ಲೆಯಲ್ಲಿ 'ಸಕಾಲ' ಸೇವೆಗಳು ಮತ್ತು ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನದಲ್ಲಿ ತೀವ್ರ ಹಿನ್ನಡೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ತುರ್ತು ಕ್ರಮಗಳೇನು; | ಹಾಲಿ ಲಭ್ಯವಿರುವ ಸಿಬ್ಬಂದಿಗಳಿಗೆ ಹೆಚ್ಚುವರಿ ಕಾರ್ಯವಹಿಸಿ ಸಕಾಲ ಸೇವೆಗಳು ಹಾಗೂ ಇತರೆ ಕಾರ್ಯಗಳಲ್ಲಿ ಹಿನ್ನಡೆಯಾಗದಂತೆ ಕ್ರಮ ವಹಿಸಲಾಗಿರುತ್ತದೆ. |

| | | |
|---|---|---|
| (ಉ) | ಹೈದರಾಬಾದ್-ಕರ್ನಾಟಕ (ಕಲ್ಯಾಣ ಕರ್ನಾಟಕ) ಭಾಗದ ವಿಶೇಷ ಅಭಿವೃದ್ಧಿ ಯೋಜನೆಯಡಿ ಬೀದರ್ ಜಿಲ್ಲೆಯ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ವಿಶೇಷ ನೇಮಕಾತಿ ಅಭಿಯಾನ (Special Recruitment Drive) ಹಮ್ಮಿಕೊಳ್ಳುವ ಉದ್ದೇಶ ಸರ್ಕಾರಕ್ಕಿದೆಯೇ; ಇದ್ದಲ್ಲಿ, ಈ ಪಕ್ರಿಯೆಯನ್ನು ಎಷ್ಟು ಕಾಲಮಿತಿಗಳಿಗೆ ಪೂರ್ಣಗೊಳಿಸಲಾಗುವುದು? | ಒಳಮೀಸಲಾತಿ ಸಮಸ್ಯೆ ಹಿನ್ನೆಲೆಯಲ್ಲಿ ನೇಮಕಾತಿ ಪ್ರಕ್ರೀಯೆಗೆ ಹಿನ್ನಡೆಯಾಗಿತ್ತು. ಪ್ರಸ್ತುತ ರಾಜ್ಯ ಸರ್ಕಾರವು ದಿನಾಂಕ:27.02.2026ರಂದು ಆದೇಶ ಹೊರಡಿಸಿ 30 ದಿನಗಳಲ್ಲಿ ನೇಮಕಾತಿ ಪ್ರಕ್ರೀಯೆಗಳನ್ನು ಕೈಗೊಳ್ಳುವಂತೆ ಸೂಚಿಸಿದೆ. ಅದರಂತೆ ನೇಮಕಾತಿ ಪ್ರಾಧಿಕಾರಗಳು ನೇಮಕಾತಿ ಪ್ರಕ್ರೀಯೆಗಳನ್ನು ಕೈಗೊಳ್ಳುತ್ತವೆ. |

ಸಂಖ್ಯೆ: ಪಿಡಿಎಸ್ 15 ಹೆಚ್‌ಕೆಡಿ 2026

**(ಡಿ.ಸುಧಾಕರ್)**
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ ಸಚಿವರು.

ಪ್ರಶ್ನೆ ಸಂಖ್ಯೆ. 922(೧೮೯) **ಅನುಬಂಧ-ಎ**

1

| ಕ್ರ.ಸಂ. | ಇಲಾಖೆ/ಕಚೇರಿ ಹೆಸರು | ವೃಂದ | ಮಂಜೂರಾದ ಹುದ್ದೆಗಳ ಸಂಖ್ಯೆ | ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|---|
| 1 | ಕಂದಾಯ ಇಲಾಖೆ | ಎ | 5 | 5 | 0 |
| | | ಬಿ | 20 | 18 | 2 |
| | | ಸಿ | 615 | 543 | 72 |
| | | ಡಿ | 82 | 41 | 41 |
| | | **ಒಟ್ಟು** | **722** | **607** | **115** |
| 2 | ಶಿಕ್ಷಣ ಇಲಾಖೆ | ಎ | 18 | 11 | 7 |
| | | ಬಿ | 201 | 146 | 55 |
| | | ಸಿ | 7440 | 5658 | 1782 |
| | | ಡಿ | 255 | 162 | 93 |
| | | **ಒಟ್ಟು** | **7914** | **5977** | **1937** |
| | | | | | |
| 3 | ಆರೋಗ್ಯ ಇಲಾಖೆ | ಎ | 193 | 150 | 43 |
| | | ಬಿ | 14 | 7 | 7 |
| | | ಸಿ | 1174 | 885 | 289 |
| | | ಡಿ | 451 | 196 | 255 |
| | | **ಒಟ್ಟು** | **1832** | **1238** | **594** |
| 4 | ಪೊಲೀಸ ಇಲಾಖೆ | ಎ | 8 | 7 | 1 |
| | | ಬಿ | 21 | 18 | 3 |
| | | ಸಿ | 1991 | 1855 | 136 |
| | | ಡಿ | 16 | 16 | 0 |
| | | **ಒಟ್ಟು** | **2036** | **1896** | **140** |
| | | | | | |

ಅಪರ ಜಿಲ್ಲಾಧಿಕಾರಿ
ಬೀದರ ಜಿಲ್ಲೆ, ಬೀದರ.